
ಕಾರಣವಾಗಿ ದ್ರೌಪದಿ ತನಗೆ ಇಷ್ಟವಿಲ್ಲದಿದ್ದರೂ ಪಂಚಪಾಂಡವರಿಗೆ ಸರದಿಯ ಸತಿಯಾಗಿ ಹಂಚಿಹೋಗಬೇಕಾಗುತ್ತದೆ. ಹೀಗಾಗಿ, ಇದನ್ನೂ ಸಹ ನಿಜಾರ್ಥದಲ್ಲಿ ಸ್ವಯಂವರ ಎನ್ನಲಾಗದು.

ಹೋಮರನ ಗ್ರೀಕ್ ಮಹಾಕಾವ್ಯ 'ಒಡಿಸ್ಸಿ'ಯಲ್ಲೂ ಒಂದು ವಿಲಕ್ಷಣ ಸ್ವಯಂವರ ಪ್ರಸಂಗ ಬರುತ್ತದೆ. ಗೊತ್ತಿಲ್ಲದವರಿಗಾಗಿ ಅದನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಇಥಾಕಾ ಎಂಬ ರಾಜ್ಯದ ದೊರೆ



ಯೂಲಿಸಿಸ್ ಮಹಾ ಪರಾಕ್ರಮಿ. ಅವನಿಗೆ ಆಗಷ್ಟೇ ಪೆನೆಲಪಿ ಎಂಬ ಚೆಲುವೆಯೊಂದಿಗೆ ಮದುವೆಯಾಗಿ ಟೆಲಿಮ್ಯಾಖಸ್ ಎಂಬ ಪುಟ್ಟ ಗಂಡುಕೂಸಿದೆ. ಟ್ರೋಜನ್ ಯುದ್ಧದಲ್ಲಿ ಗ್ರೀಕರ ಪರವಾಗಿ ಹೋರಾಡಲು ಅವನಿಗೆ ಕರೆ ಬರುತ್ತದೆ. ಹೋಗಬೇಕಾದ್ದು ಕರ್ತವ್ಯ ಮತ್ತು ಅನಿವಾರ್ಯ. ಹೀಗಾಗಿ, ಹೆಂಡತಿ, ಮಗುವನ್ನು ಬಿಟ್ಟು ತನ್ನ ಸೈನ್ಯದೊಂದಿಗೆ ಹಡಗುಗಳಲ್ಲಿ ಅವನು ಟ್ರಾಯ್ ಕಡೆಗೆ ಹೊರಡುತ್ತಾನೆ. ಟ್ರೋಜನ್ ಯುದ್ಧ ಹತ್ತು ವರ್ಷಗಳ ಕಾಲ ನಡೆದು, ಗ್ರೀಕರು ಗೆಲ್ಲುತ್ತಾರೆ. ಯೂಲಿಸಿಸ್ ತನ್ನ ರಾಜ್ಯಕ್ಕೆ ಮರುಪ್ರಯಾಣ ತೊಡಗುತ್ತಾನೆ. ಹಲವಾರು ಅಡ್ಡಿ ಆತಂಕಗಳು, ಘನಘೋರ ಸಾಹಸಗಳು ಮುಗಿದು, ಅವನು ತನ್ನ ಊರಿಗೆ ಹಿಂತಿರುಗಲು ಮತ್ತೆ ಹತ್ತು ವರ್ಷಗಳಾಗುತ್ತವೆ. ಮಹಾ ಪತಿವ್ರತೆಯಾದ ಪೆನೆಲಪಿ, ಆ ಇಪ್ಪತ್ತು ವರ್ಷಗಳ ಕಾಲ ತನ್ನ ಪತಿಯ ಪುನರಾಗಮನಕ್ಕಾಗಿ ನಿಷ್ಠೆಯಿಂದ ಕಾಯುತ್ತಾಳೆ. ಈ ನಡುವೆ ಇಥಾಕಾ ಮತ್ತು ಸುತ್ತುಮುತ್ತಲಿನ ನೂರೆಂಟು ಸರದಾರರು, "ಯೂಲಿಸಿಸ್ ಬದುಕಿಲ್ಲ, ಆದ್ದರಿಂದ ನಮ್ಮಲ್ಲೇ ಒಬ್ಬನನ್ನು ನೀನು ವರಿಸು" ಎಂದು ಅವಳನ್ನು ಪೀಡಿಸುತ್ತಿರುತ್ತಾರೆ. ಅವಳು ಅನೇಕ ಸಬೂಬುಗಳನ್ನು ಹೇಳುತ್ತ ಕಾಲ ದೂಡುತ್ತಿರುತ್ತಾಳೆ.

ಯೂಲಿಸಿಸ್ ಒಬ್ಬ ಭಿಕಾರಿ ವೃದ್ಧನ ಮಾರುವೇಷದಲ್ಲಿ ಊರು ಸೇರುತ್ತಾನೆ. ಗುಟ್ಟಾಗಿ ಪೆನೆಲಪಿಯನ್ನು ಭೇಟಿಯಾಗುತ್ತಾನೆ. ಅವಳ ಪೀಡಕರ ನಿವಾರಣೆಗೆ ಒಂದು ಉಪಾಯ ಸೂಚಿಸುತ್ತಾನೆ. ಅದರಂತೆ ಪೆನೆಲಪಿ ತನ್ನನ್ನು ವರಿಸಲು ಬಯಸುವ ಸರದಾರರಿಗೆ ಒಂದು ಪಣ ಒಡ್ಡುತ್ತಾಳೆ. ಯೂಲಿಸಿಸ್ ಬಳಸುತ್ತಿದ್ದ ಧನುಸ್ಸಿಗೆ ಹೆದೆಯೇರಿಸಿ, ಸಾಲಾಗಿ ನಿಲ್ಲಿಸಿದ್ದ ಹತ್ತು ಕೃತಕ ವೃಷಭಶಿರಗಳನ್ನು ಒಂದೇ ಬಾರಿಗೆ ಭೇದಿಸುವಂತೆ ಬಾಣ ಬಿಡಬೇಕು. ನಿರೀಕ್ಷೆಯಂತೆ ಎಲ್ಲ ಸರದಾರರೂ ಪಣದಲ್ಲಿ ಸೋಲುತ್ತಾರೆ. ಕೊನೆಗೆ ಮಾರುವೇಷದಲ್ಲಿದ್ದ ಯೂಲಿಸಿಸ್ ತಾನೇ ತನ್ನ ಬಿಲ್ಲಿಗೆ ಹೆದೆಯೇರಿಸಿ, ಚಕಚಕನೆ ಬಾಣಗಳನ್ನು ಪ್ರಯೋಗಿಸಿ ಎಲ್ಲ ಪೀಡಕರನ್ನೂ ಸಂಹರಿಸಿ, ಮತ್ತೆ ಪೆನೆಲಪಿಯ ಕೈಹಿಡಿಯುತ್ತಾನೆ. ಹೀಗಾಗಿ ಇದು ಪೆನೆಲಪಿಯ ಪಾತಿವ್ರತ್ಯ ಮತ್ತು ಯೂಲಿಸಿಸ್ಸನ ಶೌರ್ಯವನ್ನು ನಿರೂಪಿಸುವ ಪ್ರಸಂಗವೇ ಹೊರತು ನಿಜಾರ್ಥದಲ್ಲಿ ಸ್ವಯಂವರವಲ್ಲ.

ಹಾಗೆ ನೋಡಿದರೆ, ನಮ್ಮ ಪುರಾಣಗಳಲ್ಲಿ ಬರುವ ನಿಜವಾದ ಸ್ವಯಂವರವೆಂದರೆ ಅದು ದಮಯಂತಿಯ ಸ್ವಯಂವರ ಮಾತ್ರವೇ ಎಂದು ನನ್ನ ಸೀಮಿತ ತಿಳಿವಳಿಕೆ. ಏಕೆಂದರೆ, ಇಲ್ಲಿ ಯಾವುದೇ ಪಣವಿಲ್ಲ. ರಾಜಹಂಸವೊಂದರ ದೌತ್ಯದ ಮೂಲಕ ಪರಿಚಿತರಾದ ನಳ ಮಹಾರಾಜ ಮತ್ತು ದಮಯಂತಿ